ಅ) ಇವುಗಳಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ಕೊಡುವ ಸಹಾಯ ಧನ ಬಾಕಿ ಇದೆ. ವಿವರ ನೀಡುವುದು.

ಇ) ಬಾಕಿಯಿದ್ದಲ್ಲಿ ಯಾವಾಗ ಈ ಹಣವನ್ನು ನೀಡಲಾಗುವುದು.

ಈ) ಸರ್ಕಾರದಿಂದ ಸಹಾಯ ಧನ ಸಿಗದೆ ನಷ್ಟ ಹೊಂದಿರುವ ಸಣ್ಣ ಕೈಗಾರಿಕೆಗಳಿಗೆ ಪರಿಹಾರ ನೀಡಲಾಗುವುದೆ?

ಶ್ರೀ ಎನ್.ಎಂ. ನಬಿ (ಸಣ್ಣ ಕೈಗಾರಿಕಾ ಸಚಿವರು) :

ಅ) 31.3.1995ರಲ್ಲಿದ್ದಂತೆ 1,63,524 ಕೈಗಾರಿಕೆಗಳು ಇವೆ.

ಆ) 1379 ಸಣ್ಣ ಕೈಗಾರಿಕೆಗಳಿಗೆ ರೂ. 17.54 ಕೋಟಿ ಸಹಾಯ ಧನ ನೀಡಬೇಕಾಗಿದೆ.

ಇ) ಸದ್ಯದಲ್ಲಿಯೇ ಇದನ್ನು ವಿತರಿಸಲಾಗುವುದು.

ಈ) ಇಲ್ಲ.

ಬೃಹತ್ ಕೈಗಾರಿಕೆಗಳಿಂದ ಆಗುವ ಮಾಲಿನ್ಯ ಕುರಿತು

439 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಪ್ರಸ್ತುತ ಇರುವ ನೆಲ, ಜಲ ಹಾಗೂ ವಾಯುವಿನ ಮಾಲಿನ್ಯ ಹೊರುವ ಸಾಮರ್ಥ್ಯವನ್ನು ನಿರ್ಧರಿಸುವವರೆಗೆ ಯಾವುದೇ ಹೊಸ ಬೃಹತ್ ಕೈಗಾರಿಕೆಗಳಿಗೆ ಅನುಮತಿ ನೀಡಲಾಗುವುದಿಲ್ಲ ಎನ್ನುವ ಸರ್ಕಾರದ ಆದೇಶವಿದ್ದರೂ ನಾಗಾರ್ಜುನ ಮತ್ತು ಉಷಾ ಇಸ್ಪಾಟ್‌ಗಳ ಯೋಜನೆಗಳಿಗೆ ಅಂಗೀಕಾರ ನೀಡಿದ್ದು ಸರಿಯೇ?

ಆ) ಅಂಗೀಕಾರ ನೀಡಿದ್ದಾದರೆ ಇದು ಕಾನೂನು ಬಾಹಿರವಲ್ಲವೇ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) ಜಿಲ್ಲೆಯಲ್ಲಿ ಹೊಸ ಯೋಜನೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಮುನ್ನ ಈ ಪ್ರದೇಶದ ಪರಿಸರದ ಧಾರಣ ಶಕ್ತಿಯನ್ನು ಅಭ್ಯಸಿಸಬೇಕೆಂದು ಸರ್ಕಾರ ಇತ್ತೀಚೆಗೆ ಒಂದು ನಿರ್ಧಾರವನ್ನು ತೆಗೆದುಕೊಂಡಿದೆ. ನಾಗಾರ್ಜುನ ಮತ್ತು ಉಷಾ ಐರನ್ ಮತ್ತು ಫೆರೊಮೆಟಲ್ಸ್ ಯೋಜನೆಗಳ ಪ್ರಸ್ತಾವನೆಯನ್ನು ಉನ್ನತ ಮಟ್ಟದ ಸಮಿತಿಯು ಈ ರೀತಿ ನಿರ್ಧಾರ ತೆಗೆದುಕೊಂಡಿರುವ ಮುಂಚೆಯೇ ಅನುಮೋದನೆ ನೀಡಿದ್ದಿತು. ಆದರೂ ಸಹ ಈ ಯೋಜನೆಗಳನ್ನು ಸ್ಥಾಪಿಸುವುದಕ್ಕೆ ಮುಂಚೆ ಪರಿಸರದ ದೃಷ್ಟಿಯಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರದ ಪ್ರಾಧಿಕಾರಿಗಳ ಅನುಮತಿಯನ್ನು ಪಡೆಯುವಂತೆ ನಿಬಂಧನೆ ವಿಧಿಸಿ ಅವುಗಳಿಗೆ ಸರ್ಕಾರ ಅನುಮತಿಯನ್ನು ನೀಡಿದೆ.

ಆ) ಉದ್ಭವಿಸುವುದಿಲ್ಲ.

ಬೃಹತ್ ಕೈಗಾರಿಕೆಗಳಿಗೆ ಉಚಿತವಾಗಿ ನೀಡಿರುವ ಭೂಮಿಯ ಬಗ್ಗೆ

438 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು ತಾಲ್ಲೂಕಿನ ತೋಕೂರು ಕೆಂಜಾರು, ಪಣಂಬೂರು ಮತ್ತು ಬೈಂಪಾಡಿ ಗ್ರಾಮಗಳಲ್ಲಿ ರಾಜ್ಯ ಸರ್ಕಾರದ ಕಂದಾಯ ಇಲಾಖೆಯ ಸ್ವಾಧೀನದ 400 ಎಕರೆ ಭೂಮಿಯನ್ನು ಬೃಹತ್ ಕೈಗಾರಿಕೆಯೊಂದಕ್ಕೆ ಉಚಿತವಾಗಿ ನೀಡಲಾಗಿದೆಯೇ?

ಅ) ಯಾವ ಯಾವ ಬೃಹತ್ ಕೈಗಾರಿಕೆಗಳಿಗೆ ಮಂಗಳೂರು ತಾಲ್ಲೂಕಿನಲ್ಲಿ ಭೂಮಿಯನ್ನು ನೀಡಲಾಗಿದೆ. ವಿವರ ತಿಳಿಸುವುದು.

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ) ಮತ್ತು ಆ) ಪ್ರಸ್ತುತ ಮಂಗಳೂರು ತಾಲ್ಲೂಕಿನಲ್ಲಿ 155 ಎಕರೆ ಜಮೀನನ್ನು ಎಲ್.ಆರ್. ಪಿ.ಎಲ್.ಡಿ. ಸಂಸ್ಥೆಗೆ ತೈಲ ಶುದ್ಧೀಕರಣ ಕಾರ್ಖಾನೆಯ ಸ್ಥಾಪನೆಗಾಗಿ ಉಚಿತವಾಗಿ ನೀಡಲಾಗಿದೆ. ಸರ್ಕಾರ ತನ್ನ ಆದೇಶ ಸಂಖ್ಯೆ : ಆರ್‌ಡಿ 7 ಎಲ್‌ಜಿಎ 92 ದಿ: 21.12.93ರಲ್ಲಿ ಮಂಗಳೂರಿನಲ್ಲಿ ಸ್ಥಾಪಿಸಲು ಪ್ರಸ್ತಾವಿಸಿದ ಸಮಗ್ರ ಉಕ್ಕು ಸ್ಥಾವರ ಸ್ಥಾಪನೆಗಾಗಿ 217.83 ಎಕರೆ ಜಮೀನನ್ನು ಮೆ: ಜಯಪ್ರಕಾಶ್ ಇಂಜಿನಿಯರಿಂಗ್ ಮತ್ತು ಸ್ಟೀಲ್ ಕಂಪನಿಗಾಗಿ ಮಂಜೂರು ಮಾಡಿದೆ.

ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿರುವ ಕೈಗಾರಿಕೆಗಳ ಸಂಖ್ಯೆ

441 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು?

ಆ) ಈ ಕೈಗಾರಿಕೆಗಳಲ್ಲಿ ಯಾವ ಯಾವ ಕೈಗಾರಿಕೆಗಳು ಲಾಭದಲ್ಲಿ ನಡೆಯುತ್ತಿವೆ, ಹಾಗೂ ನಷ್ಟದಲ್ಲಿ ನಡೆಯುತ್ತಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು; ಈ ಕೈಗಾರಿಕೆಗಳು ನಷ್ಟದಲ್ಲಿರಲು ಕಾರಣಗಳೇನು;

ಇ) ನಷ್ಟ ಅನುಭವಿಸುತ್ತಿರುವ ಕೈಗಾರಿಕೆಗಳು ಆರ್ಥಿಕ ಮಟ್ಟ ಸುಧಾರಿಸಿ ಲಾಭಗಳಿಸುವಂತೆ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ) 30 (ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಇಲಾಖೆಯ ವ್ಯಾಪ್ತಿಯಲ್ಲಿ 19)

ಆ) ಲಾಭ ಗಳಿಸುತ್ತಿದ್ದ ಸಾರ್ವಜನಿಕ ಉದ್ದಿಮೆಗಳು ಹಾಗೂ ನಷ್ಟದಲ್ಲಿ ನಡೆಯುತ್ತಿರುವ ಸಾರ್ವಜನಿಕ ಉದ್ದಿಮೆಗಳ ಪಟ್ಟಿಯನ್ನು ಅನುಬಂಧ 1ರಲ್ಲಿ ನೀಡಲಾಗಿದೆ.

ನಷ್ಟಕ್ಕೆ ಕಾರಣಗಳು : ಕೆಲವು ಉದ್ದಿಮೆಗಳು ನಷ್ಟದಲ್ಲಿ ನಡೆಯುತ್ತಿರುವ ಕಾರಣಗಳು, ಅಧಿಕ ಸಿಬ್ಬಂದಿ, ಹಳೇ ಯಂತ್ರೋಪಕರಣಗಳು ಕಳಪೆದರ್ಜೆಯ ಉತ್ಪಾದಕತೆ ಮತ್ತು ಮಾರ್ಕೆಟಿಂಗ್.

ಇ) ನಷ್ಟ ಅನುಭವಿಸುತ್ತಿರುವ ಕೈಗಾರಿಕೆಗಳ ಆರ್ಥಿಕ ಮಟ್ಟ ಸುಧಾರಣೆ ಲಾಭ ಗಳಿಸುವಂತೆ ಮಾಡಲು ತೆಗೆದುಕೊಂಡಿರುವ ಕ್ರಮಗಳಲ್ಲಿ ತಂತ್ರ ಕುಶಲತೆಯ ಪಾಲುದಾರರನ್ನು ತೆಗೆದುಕೊಳ್ಳುವುದರ ಮೂಲಕ ಖಾಸಗೀಕರಣ ಮೂಲಕ ಒಂದಾದ ಪುನರ್ ಸಜ್ಜೀಕರಣ ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಗಣನೆಯಲ್ಲಿದೆ.

Annexure-I

List of Public Sector undertakings

1.	Hutti Gold Mines Ltd.	-	Profit
2.	Karnataka Telecom Ltd.	-	Profit
3.	Karnataka State Handicrafts Development Corporation Ltd.	-	Profit